ಪುನರುತ್ಥಾನ ದಿನದಂದು ಸೂರ್ಯನನ್ನು ಸೃಷ್ಟಿಗಳ ಹತ್ತಿರ ತರಲಾಗುವುದು. ಎಷ್ಟೆಂದರೆ ಅದು ಅವರಿಂದ ಸುಮಾರು ಒಂದು 'ಮೀಲ್' ಅಂತರದಲ್ಲಿರುತ್ತದೆ

ಮಿಖ್ದಾದ್ ಬಿನ್ ಅಸ್ವದ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ಪುನರುತ್ಥಾನ ದಿನದಂದು ಸೂರ್ಯನನ್ನು ಸೃಷ್ಟಿಗಳ ಹತ್ತಿರ ತರಲಾಗುವುದು. ಎಷ್ಟೆಂದರೆ ಅದು ಅವರಿಂದ ಸುಮಾರು ಒಂದು 'ಮೀಲ್' ಅಂತರದಲ್ಲಿರುತ್ತದೆ". (ವರದಿಗಾರರಾದ) ಸುಲೈಮ್ ಇಬ್ನ್ ಆಮಿರ್ ಹೇಳಿದರು: "ಅಲ್ಲಾಹುವಿನಾಣೆ, 'ಮೀಲ್' ಎಂದರೆ ಅದರ ಅರ್ಥವೇನೆಂದು ನನಗೆ ತಿಳಿದಿಲ್ಲ? ಅದು ಭೂಮಿಯ ದೂರದ ಅಳತೆಯೇ (ಮೈಲಿ), ಅಥವಾ ಕಣ್ಣಿಗೆ ಸುರ್ಮಾ ಹಚ್ಚಲು ಬಳಸುವ ಕಡ್ಡಿಯೇ (ಎಂದು ನನಗೆ ತಿಳಿದಿಲ್ಲ)?". ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಮುಂದುವರಿಸಿ ಹೇಳಿದರು: "ಆಗ ಜನರು ತಮ್ಮ ಕರ್ಮಗಳಿಗನುಸಾರವಾಗಿ ಬೆವರಿನಲ್ಲಿರುತ್ತಾರೆ. ಕೆಲವರು ತಮ್ಮ ಹರಡುಗಂಟುಗಳವರೆಗೆ (ಬೆವರಿನಲ್ಲಿ) ಇರುತ್ತಾರೆ, ಕೆಲವರು ತಮ್ಮ ಮೊಣಕಾಲುಗಳವರೆಗೆ ಇರುತ್ತಾರೆ, ಕೆಲವರು ತಮ್ಮ ಸೊಂಟದವರೆಗೆ ಇರುತ್ತಾರೆ, ಮತ್ತು
ಕೆಲವರಿಗೆ ಬೆವರು (ಬಾಯಿಯ ಮಟ್ಟಕ್ಕೆ ತಲುಪಿ) ಕಡಿವಾಣ ಹಾಕಿದಂತಿರುತ್ತದೆ". ವರದಿಗಾರರು
ಹೇಳಿದರು: "ಮತ್ತು ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ತಮ್ಮ ಕೈಯಿಂದ ತಮ್ಮ ಬಾಯಿಯ ಕಡೆಗೆ ಸೂಚಿಸಿದರು". [صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಪುನರುತ್ಥಾನ ದಿನದಂದು ಸೂರ್ಯನನ್ನು ಸೃಷ್ಟಿಗಳ ಹತ್ತಿರ ತರಲಾಗುವುದು ಮತ್ತು ನಿಕಟಗೊಳಿಸಲಾಗುವುದು. ಎಷ್ಟರಮಟ್ಟಿಗೆ ಎಂದರೆ ಅದು ಅವರ ತಲೆಗಳಿಂದ ಸುಮಾರು ಒಂದು 'ಮೀಲ್' ಅಂತರದಲ್ಲಿರುತ್ತದೆ. ತಾಬಿಈವರ್ಯರಾದ ಸುಲೈಮ್ ಬಿನ್ ಆಮಿರ್ ಹೇಳಿದರು: ಅಲ್ಲಾಹುವಿನಾಣೆ, ಅವರು ಯಾವ 'ಮೀಲ್' ಅನ್ನು ಉದ್ದೇಶಿಸಿದ್ದರು ಎಂದು ನನಗೆ ತಿಳಿದಿಲ್ಲ. ಭೂಮಿಯ ದೂರದ ಅಳತೆಯೇ, ಅಥವಾ ಕಣ್ಣಿಗೆ ಸುರ್ಮಾ ಹಚ್ಚುವ ಕಡ್ಡಿಯೇ? ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: ಆಗ ಅವರು ತಮ್ಮ ಕರ್ಮಗಳಿಗನುಗುಣವಾಗಿ ಬೆವರಿನಲ್ಲಿರುತ್ತಾರೆ. ಕೆಲವರ ಬೆವರು ಅವರ ಹರಡುಗಂಟುಗಳವರೆಗೆ ಇರುತ್ತದೆ. ಕೆಲವರ ಬೆವರು ಮೊಣಕಾಲುಗಳವರೆಗೆ ಇರುತ್ತದೆ. ಕೆಲವರ ಬೆವರು ಅವರ ಸೊಂಟದವರೆಗೆ (ಅಥವಾ ಪಂಚೆ/ಲುಂಗಿ ಕಟ್ಟುವ ಸ್ಥಳದವರೆಗೆ) ಇರುತ್ತದೆ. ಕೆಲವರ ಬೆವರು ಬಾಯಿಯವರೆಗೆ ತಲುಪಿ, ಮಾತನಾಡುವುದನ್ನು ತಡೆಯುತ್ತದೆ. ವರದಿಗಾರರು ಹೇಳಿದರು: ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ತಮ್ಮ ಕೈಯಿಂದ ತಮ್ಮ ಬಾಯಿಯ ಕಡೆಗೆ ಸೂಚಿಸಿದರು.

http://www.sunnah.global/hadeeth/kn/show/4289